ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ

**FDP-11/2014**

**CW-1**

**ಹೆಸರುಃ ಶ್ರೀನಿವಾಸ ಎಂ.ಜೆ.**

**ತಂದೆಃ** ಜಗನ್ನಾಥರೆಡ್ಡಿ.

**ವಯಸ್ಸುಃ** **49** ವರ್ಷ.

**ಕೆಲಸಃ** ಸರ್ವೆ ಸುಪರವೈಜರ್

**ವಾಸಃ** ಚನ್ನಗಿರಿ.

**ಇಂದು ದಿನಾಂಕ:04-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಶ್ರೀ ಬಿ.ಎಸ್ ವಕೀಲರಿಂದ ಅರ್ಜಿದಾರರ ಪರಃ

ನಾನು 2006 ರಿಂದ 2021 ರವರೆಗೆ ತಾಲೂಕು ಸರ್ವೆಯರ್ ಎಂದು ಎ.ಡಿ.ಎಲ್. ಆರ್ ಕಚೇರಿ, ಹರಿಹರದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಈ ಅರ್ಜಿಯಲ್ಲಿ ಬಂದ ಕಮೀಷನ್ ವಾರೆಂಟ್ ಪ್ರಕಾರ ಶೇರಾಪುರ ಗ್ರಾಮದ ಸರ್ವೆ ನಂಬರ್ 15 ಕ್ಷೇತ್ರ 1 ಎಕರೆ 26 ಗುಂಟೆ ಮತ್ತು ಸರ್ವೆ ನಂಬರ್ 16 ರಲ್ಲಿ 3 ಎಕರೆ 5 ಗುಂಟೆ ಇವುಗಳ ಕುರಿತು, ವಾರೆಂಟ್ ಬಂದ ನಂತರ ವಾದಿಯರು ಮತ್ತು ಪ್ರತಿವಾದಿಯರಿಗೆ ನೋಟೀಸ್ ಕಳುಹಿಸಿರುತ್ತೇನೆ. ದಿನಾಂಕಃ04-11-2015 ರಂದು ಸ್ಥಳದಲ್ಲಿ ಹಾಜರು ಇರಲು ತಿಳಿಸಿರುತ್ತೇನೆ. ಎರಡು ಆಸ್ತಿಗಳನ್ನು ಅಳತೆ ಮಾಡಿದೆನು. ವಾದಿ ನಂಬರ್ 1 ರಿಂದ 7 ಅಳತೆ ಸಮಯದಲ್ಲಿ ಹಾಜರು ಇದ್ದರು. ಪ್ರತಿವಾದಿಯರ ಪೈಕಿ ಯಾರೂ ಸ್ಥಳದಲ್ಲಿ ಹಾಜರು ಇರಲಿಲ್ಲ. ನಾನು ಕಮೀಷನರ್ ಕೆಲಸ ಪೂರೈಯಿಸಿ ನನ್ನ ವರದಿಯನ್ನು ಸಲ್ಲಿಸಿರುತ್ತೇನೆ. ಕಮೀಷನರ್ ವರದಿಯನ್ನು ನಿ.ಸಿ-1 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ **8** ಮತ್ತು **9** ನೇ ಎದುರುದಾರರ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**